15ಪ್ರಶ್ನೆ ನಿ:72 = 96
4ಕಾ
2807

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್ ಇವರು ನಿಯಮ 72ರಡಿ ನೀಡಿರುವ ಸೂಚನೆಗೆ ಮಾಹಿತಿ:-**

**ಸೂಚನೆ:-**

ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಕಸಬಾ ಹೋಬಳಿ, ಬೀರೇಶ್ವರಪುರ ಗ್ರಾಮದ ವ್ಯಾಪ್ತಿಗೆ ಸೇರಿದ ಸರ್ವೆ ನಂ.96 ರಲ್ಲಿ ಗೋಮಾಳವನ್ನು ಒತ್ತುವರಿ ಮಾಡಿರುವವರಿಂದ ತೆರವುಗೊಳಿಸಿ, ಸದರಿ ಗೋಮಾಳವನ್ನು ಶಾಶ್ವತವಾಗಿ ಮೀಸಲಿಡಲು ಕ್ರಮವಹಿಸಲಾಗುವುದೆಂದು ಕಳೆದ ಅಧಿವೇಶನದ (ದಿನಾಂಕ:13.12.2023) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 944ಕ್ಕೆ ಮಾನ್ಯ ಕಂದಾಯ ಸಚಿವರು ಭರವಸೆಯ ಉತ್ತರ ನೀಡಿರುತ್ತಾರೆ. ಆದರೆ ಇದುವರೆಗೂ ಅಕ್ರಮವಾಗಿ ಗೋಮಾಳವನ್ನು ಒತ್ತುವರಿ ಮಾಡಿರುವ/ ಆಕ್ರಮಿಸಿಕೊಂಡಿರುವವರಿಂದ ತೆರವುಗೊಳಿಸಲು ಇದುವರೆಗೂ ಸರ್ಕಾರದಿಂದ (ಜಿಲ್ಲಾ / ತಾಲ್ಲೂಕು ಆಡಳಿತ) ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಸದರಿ ಗೋಮಾಳವನ್ನು ಆಕ್ರಮಿತರಿಂದ ಕೂಡಲೇ ತೆರವುಗೊಳಿಸಿ ಶಾಶ್ವತವಾಗಿ ಮೀಸಲಿಡಲು ಕ್ರಮವಹಿಸುವ ಬಗ್ಗೆ.

**ಉತ್ತರ:-**

ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಕಸಬಾ ಹೋಬಳಿ, ಬೀರೇಶ್ವರಪುರ ಗ್ರಾಮದ ಸ.ನಂ 96 ರಲ್ಲಿ ಗೋಮಾಳ ಜಮೀನನ್ನು ಒತ್ತುವರಿ ಮಾಡಿರುವ / ಆಕ್ರಮಿಸಿಕೊಂಡಿರುವವರಿಂದ ತೆರವುಗೊಳಿಸುವ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಲಾಗಿ ಬೀರೇಶ್ವರಪುರ ಗ್ರಾಮದ ಸ.ನಂ 96 ರಲ್ಲಿ 103.10 ಎಕರೆ/ಗುಂಟೆ ಜಮೀನನ್ನು ಅಕ್ರಮ-ಸಕ್ರಮದಡಿ ಭೂ ಮಂಜೂರಾತಿಗಾಗಿ ನಮೂನೆ 53 ಮತ್ತು 57 ರಲ್ಲಿ ಒಟ್ಟು 40 ಅರ್ಜಿಗಳು ಸ್ವೀಕೃತಿಯಾಗಿರುತ್ತವೆ.

ಕರ್ನಾಟಕ ಭೂ ಕಂದಾಯ ಅಧಿನಿಯಮ,1964 ಕಲಂ 94-ಎ(4), ಕರ್ನಾಟಕ ಭೂ ಕಂದಾಯ ನಿಯಮಗಳು, 1966 ನಿಯಮ 108ಐ(2) ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್ ಡಿ 45 ಎಲ್.ಜಿ.ಪಿ 2023 ದಿನಾಂಕ:01.12.2023 ರಲ್ಲಿ ವಿಧಿಸಿರುವ ನಿರ್ಬಂಧಗಳನ್ವಯ ಬೀರೇಶ್ವರಪುರ ಗ್ರಾಮದ ಸ.ನಂ 96 ರ ಗೋಮಾಳದ ಜಮೀನು ನಾಗಮಂಗಲ ಪುರಸಭಾ ವ್ಯಾಪ್ತಿಗೆ ಒಳಪಡುವುದರಿಂದ ಖಾಸಗಿ ವ್ಯಕ್ತಿಗಳಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಅಲ್ಲದೇ ಸದರಿ ಜಮೀನು ಸರ್ಕಾರದ ಸಂಖ್ಯೆ: ಜಿ7877-ಎಫ್.ಟಿ, ದಿನಾಂಕ:04.01.1928 ರ ಅಧಿಸೂಚನೆಯನ್ವಯ ಪ್ರಸ್ತುತ ಬೀರೇಶ್ವರಪುರ (ಹಿಂದಿನ ಕಳ್ಳನಕೆರೆ) ಗ್ರಾಮದ ಸ.ನಂ 96 ರ 313-06 ಎಕರೆ/ಗುಂಟೆ ಜಮೀನು ಗ್ರಾಮ ಅರಣ್ಯಕ್ಕೆಂದು ಅಧಿಸೂಚನೆಯಾಗಿರುತ್ತದೆ. ಅದರನ್ವಯ ಈ ಮೇಲ್ಕಂಡಂತೆ ಭೂ ಮಂಜೂರಾತಿಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ತಿರಸ್ಕರಿಸಬೇಕಾಗಿರುತ್ತದೆ. ಆದ್ದರಿಂದ, ಸದರಿ ಅರ್ಜಿಗಳನ್ನು ತಿರಸ್ಕರಿಸಲು ಬಗರ್ ಹುಕುಂ ತಂತ್ರಾಂಶದ ಮೂಲಕವೇ ಸಕ್ಷಮ ಪ್ರಾಧಿಕಾರದಿಂದ ಆದೇಶ ಪಡೆದು ಅಕ್ರಮವಾಗಿ ಒತ್ತುವರಿಯಾಗಿರುವ ಗೋಮಾಳದ ಪ್ರದೇಶವನ್ನು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ.

**(ಕಡತ ಸಂಖ್ಯೆ: ಆರ್‌ಡಿ 34 ಎಲ್‌ಜಿವೈ 2025)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು